**ದಿನಾಂಕಃ 17-03-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಸಿ.ಕೆ.ಜಿ.** ವಕೀಲರಿಂದ **ಆರೋಪಿ** ಪರವಾಗಿ ಃ-

ನಾನು ಈ ಪ್ರಕರಣದ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ. ನಿಪಿ-3 ರ ನೋಟಿಸಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ನೋಟಿಸಿನ ಮಾಹಿತಿಯನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೇನೆ. ನನ್ನ ಪ್ರಮಾಣಪತ್ರಿಕೆಯಲ್ಲಿನ ಮಾಹಿತಿಯನ್ನು ನಾನೇ ನೀಡಿರುತ್ತೇನೆ, ಸದರಿಯನ್ನು ಕೂಡ ಕೇಳಿ ತಿಳಿದುಕೊಂಡಿರುತ್ತೇನೆ. ದೂರಿಗೆ ಮಾಹಿತಿಯನ್ನು ನಾನೇ ನೀಡಿದ್ದು, ಓದಿಸಿ ತಿಳಿದುಕೊಂಡಿರುತ್ತೇನೆ. ನಾನು ಪ್ರಸ್ತುತ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಆರೋಪಿಯವರು ನನ್ನ ದೂರದ ಸಂಬಂಧಿ. ನಾನು ಆರೋಪಿಯವರಿಗೆ ಕಾರನ್ನು ಮಾರಾಟ ಮಾಡಿ 4,21,000/- ರೂಪಾಯಿ ನೀಡಿರುತ್ತೇನೆಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ. ನಾನು ನನ್ನ ದೂರಿನಲ್ಲಿ ಆರೋಪಿಗೆ ಹಣ ನೀಡುವಾಗ 4,21,000/- ರೂಪಾಯಿಯನ್ನು ಕಾರು ಮಾರಾಟ ಮಾಡಿ ಇಟ್ಟಿದ್ದೆ ಎಂದು ಹೇಳಿರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ಆರೋಪಿಗೆ ಹಂತ ಹಂತವಾಗಿ ಹಣ ನೀಡಿರುತ್ತೇನೆ ಎನ್ನುತ್ತಾರೆ.

2. ದಿನಾಂಕಃ 30-09-2020 ರಂದು ಆರೋಪಿಯವರು ನನಗೆ ಹಣ ಕೇಳಿರುತ್ತಾರೆ. ಆರೋಪಿಯವರು ಬೆಂಗಳೂರಿನ ಕಣ್ವ ಆಸ್ಪತ್ರೆಯ ದೀಪಾ ಕಾಂಪ್ಲೆಕ್ಸ್ ಬಳಿ ಹಣ ಕೇಳಿರುತ್ತಾರೆ. ಆರೋಪಿಯವರು ಆ ದಿನ ನನ್ನ ಬಳಿ 1 ಲಕ್ಷದ 6 ಸಾವಿರ ರೂಪಾಯಿ ಕೇಳಿದ್ದು, ನನ್ನ ಬಳಿ 25 ಸಾವಿರವಿತ್ತು. ಸದರಿ 25 ಸಾವಿರವನ್ನು ನನ್ನ ಖಾತೆಯಿಂದ ಆರೋಪಿಯ ಖಾತೆಗೆ ಆ ದಿನವೇ ವರ್ಗಾಹಿಸಿರುತ್ತೇನೆ. ಮರುದಿನ

ಆರೋಪಿಗೆ ನಾನು 81 ಸಾವಿರ ನೀಡಿರುತ್ತೇನೆ. ನಾನು 1 ಲಕ್ಷದ 6 ಸಾವಿರವನ್ನು ಒಂದೇ ಬಾರಿಗೆ ವರ್ಗಾಹಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ಹಂತ ಹಂತವಾಗಿ ನೀಡಿದ್ದೆ ಎನ್ನುತ್ತಾರೆ. ಆರೋಪಿಯು ಎಂದಿಗೂ ಕೂಡ 4,21,000/- ಸಾಲ ಕೇಳಿರಲಿಲ್ಲ, ಸಾಕ್ಷಿ ಮುಂದುವರೆದು ಒಟ್ಟಿಗೆ ಕೇಳಿರಲಿಲ್ಲ ಎನ್ನುತ್ತಾರೆ.

3. ನಾನು 3,53,500/- ರೂಪಾಯಿಯನ್ನು ಹಂತ ಹಂತವಾಗಿ ಆರೋಪಿಗೆ ನೀಡಿದ್ದೆ ಎಂಬ ವಿಚಾರವನ್ನು ನನ್ನ ದೂರಿನಲ್ಲಿ ಹೇಳಿಲ್ಲ. ನಾನು ನನ್ನ ದೂರಿನಲ್ಲಿ 3,53,500/- ರೂಪಾಯಿ ಕೊಡಬೇಕೆಂದು ಹೇಳಿದ್ದೇನೆ ಎಂದರೆ ಸಾಕ್ಷಿ ಸದರಿಯು ಟೈಪಿಂಗ್ ಮಾಡುವಾಗ ತಪ್ಪಾಗಿದೆ ಎನ್ನುತ್ತಾರೆ, ಸಾಕ್ಷಿ ಮುಂದುವರೆದು ನಾನು 3,15,000/- ರೂಪಾಯಿಯನ್ನು ಹಂತ ಹಂತವಾಗಿ ಕಳುಹಿಸಿದ್ದೇನೆ ಎಂದು ಹೇಳುತ್ತಾರೆ. ನಿಪಿ-3 ರ ನೋಟಿಸಿನಲ್ಲಿಯೂ ಕೂಡ 3,53,500/- ರೂಪಾಯಿ ನಮೂದು ಆಗಿದೆ ಎಂದರೆ ಸಾಕ್ಷಿ ಅದು ಕೂಡ ಟೈಪಿಂಗ್ ನಲ್ಲಿ ತಪ್ಪಾಗಿದೆ ಎನ್ನುತ್ತಾರೆ. ಆರೋಪಿಯವರಿಗೆ ನಾನು ಒಟ್ಟು 4,21,000/- ರೂಪಾಯಿ ನೀಡಿದ್ದೆ ಎಂದು ತೋರಿಸಲು, ಆರೋಪಿಯಿಂದ ಯಾವುದಾದರೂ ದಾಖಲಾತಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಚೆಕ್ಕನ್ನು ನೀಡಿದ್ದರು ಎನ್ನುತ್ತಾರೆ. ಸದರಿ ಚೆಕ್ಕನ್ನು ಆರೋಪಿಯವರು ಬರೆದುಕೊಟ್ಟಿದ್ದರು. ಆರೋಪಿಯು ದಿಃ 22-06-2021 ರಂದು ಚೆಕ್ಕನ್ನು ನೀಡಿರುತ್ತಾರೆ. ಆ ಸಂದರ್ಬದಲ್ಲಿ ನಾನು 2,30,000/- ಹಣ ನೀಡಿದ್ದು, ಅದು ಕೊನೆಯ ಮೊತ್ತವಾಗಿರುತ್ತದೆ.

4. ನಾನು ನನ್ನ ದೂರಿನಲ್ಲಿ 4,21,000/- ರೂಪಾಯಿಯನ್ನು ಸಾಲವಾಗಿ ಪಡೆದಿದ್ದು, 1 ತಿಂಗಳಲ್ಲಿ ಹಿಂದುರುಗಿಸುವುದಾಗಿ ಆರೋಪಿಯವರು ಹೇಳಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ. ನಾನು 4,21,000/- ರೂಪಾಯಿಯನ್ನು ಹಂತ ಹಂತವಾಗಿ

ನೀಡಿದ್ದೆನೆ ಎನ್ನುವಾಗ ಯಾವುದೇ ದಾಖಲಾತಿಯನ್ನು ಭದ್ರತೆಗಾಗಿ ಪಡೆದುಕೊಂಡಿಲ್ಲ. ನಾನು ಯಾವುದೇ ಪೈನಾನ್ಸ್ ವ್ಯವಹಾರ ಮಾಡುವುದಿಲ್ಲ. ದಿನಾಂಕ: 30-09-2020 ರಂದು 1,06,000/- ರೂಪಾಯಿಗೆ ಬಡ್ಡಿಯನ್ನು ಸೇರಿಸಿ 1,90,500/- ರೂಪಾಯಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಒಟ್ಟು 4,21,000/- ರೂಪಾಯಿಗಳಲ್ಲಿ 2,30,000/- ರೂಪಾಯಿಗೆ ಚೆಕ್ಕನ್ನು ಕೊಡುವ ಮುಂಚೆ, ಸದರಿ 1,91,000/- ರೂಪಾಯಿ ಹಣವನ್ನು ಪಾವತಿ ಮಾಡಿದ್ದಾರೆ ಎನ್ನುತ್ತಾರೆ. ನಾನು ನನ್ನ ದೂರಿನಲ್ಲಿ ಒಟ್ಟು 1,91,500/- ರೂಪಾಯಿ ಎಂದು ಹೇಳಿಲ್ಲ, ಸಾಕ್ಷಿ ಮುಂದುವರೆದು 67,500/- ಮತ್ತು 1,23,500/- ರೂಪಾಯಿ ನೀಡಿದ್ದಾರೆ ಎಂದು ಹೇಳಿದ್ದೇನೆ ಎನ್ನುತ್ತಾರೆ. ನನ್ನ ಪ್ರಮಾಣಪತ್ರ ಮತ್ತು ನಿಪಿ-3 ರ ನೋಟಿಸಿನಲ್ಲಿಯೂ ಕೂಡ 1,91,500/- ರೂಪಾಯಿ ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ಸದರಿಯು ತಪ್ಪಾಗಿದೆ ಎನ್ನುತ್ತಾರೆ. ನನ್ನ ದೂರು, ನೋಟಿಸ್ ಮತ್ತು ಪ್ರಮಾಣಪತ್ರಿಕೆಯಲ್ಲಿನ ಎಲ್ಲಾ ಮಾಹಿತಿಯು ಸುಳ್ಳಾಗಿದೆ ಎಂದರೆ ಸರಿಯಲ್ಲ.

5. ಆರೋಪಿಯು ನನಗೆ ನೀಡಬೇಕಾದ ಎಲ್ಲಾ ಹಣವನ್ನು ಹಿಂದುರುಗಿಸಿದ್ದರೂ ಕೂಡ ನನ್ನ ಮತ್ತು ಅವರ ಕುಟುಂಬದ ವಿಶ್ವಾಸವನ್ನು ದುರುಪಯೋಗ ಪಡಿಸಿಕೊಂಡು ಅವರಿಗೆ ತಿಳಿಯದಂತೆ ಚೆಕ್ಕನ್ನು ಅವರ ಮನೆಯಿಂದ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಆರೋಪಿಯು ಅವರ ಕಚೇರಿಯ ಮುಂದೆಯೇ ಸಹಿ ಮಾಡಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ಸದರಿ ಚೆಕ್ಕಿಗೆ ಕೇವಲ ಸಹಿ ಮಾತ್ರ ಮಾಡಲಾಗಿತ್ತು ಎಂದರೆ ಸಾಕ್ಷಿ ಆರೋಪಿಯವರೇ ಸಹಿ ಮಾಡಿ, ಮೊತ್ತವನ್ನು ಬರೆದುಕೊಳ್ಳಿ ಎಂದು ಸ್ನೇಹಿತರಿಂದ ಬರೆಯಿಸಿಕೊಟ್ಟಿರುತ್ತಾರೆ. ನಿಪಿ-1 ರ ಚೆಕ್ಕನ್ನು ದಿನಾಂಕ 22-06-2020 ರ 15 ದಿನಗಳ ಮುಂಚೆ ಕೊಟ್ಟಿದ್ದು, ದಿನಾಂಕ: 22-06-2020 ರಂದು ಹಾಜರು ಪಡಿಸುವಂತೆ ಹೇಳಿದ್ದರು. ನಿಪಿ-1 ರ ಚೆಕ್ಕನ್ನು ಆರೋಪಿಯವರ ಮನೆಯಿಂದ

ತೆಗೆದುಕೊಂಡು ಒಕ್ಕಣೆಯನ್ನು ನಾನೇ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯವರು ವಿದ್ಯಾವಂತರಾಗಿದ್ದು, ಸರ್ಕಾರಿ ಅಧಿಕಾರ ಆಗಿದ್ದಾರೆ ಎಂದರೆ ಸರಿ. ಸದರಿ ಚೆಕ್ಕನ್ನು ಆರೋಪಿಯಿಂದಲೇ ಬರೆಯಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರೇ ಅವರ ಸ್ನೇಹಿತರ ಬಳಿ ಬರೆಯಿಸಿಕೊಟ್ಟಿದ್ದರು ಎನ್ನುತ್ತಾರೆ.

6. ಆರೋಪಿಯವರು ಎಂದೂ ಕೂಡ ನನಗೆ ಚೆಕ್ಕು ನೀಡಿರಲಿಲ್ಲ, ಸದರಿಯವರು ಸಹಿ ಮಾಡಿದ ಚೆಕ್ಕನ್ನು ನಾನು ತೆಗೆದುಕೊಂಡು ಹೋಗಿ ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-5 ರ ಅಂಚೆ ಹಿಂಬರಹದಲ್ಲಿ ಆರೋಪಿಯ ಸಹಿ ಇರದೇ ನಾನೇ ಸಹಿ ಮಾಡಿ, ನೋಟಿಸ್ ಜಾರಿಯಾಗದೇ ಎಂದು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಒಟ್ಟು 4,21,000/- ಕೊಟ್ಟಿದ್ದೆ ಎಂದು ತೋರಿಸಲು ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದೂರು ಮತ್ತು ನಿಪಿ-3 ರಲ್ಲಿ ರೂ.1,06,000/- ಮತ್ತು ರೂ.3,53,500/- ಎಂದು ಹೇಳಿದ್ದು, ಒಟ್ಟು 4,59,500/- ರೂಪಾಯಿ ಆಗುತ್ತದೆ ಎಂದರೆ ಸಾಕ್ಷಿಯು ಸದರಿಯು ಟೈಪಿಂಗ್ ನಲ್ಲಿ ತಪ್ಪಾಗಿರುತ್ತದೆ ಎನ್ನುತ್ತಾರೆ. ನಾನು ಈಗಾಗಲೇ ನಿಪಿ-3, ದೂರು ಮತ್ತು ಪ್ರಮಾಣಪತ್ರಿಕೆಯಲ್ಲಿನ ಮಾಹಿತಿಯನ್ನು ಓದಿ ತಿಳಿದುಕೊಂಡಿರುತ್ತೇನೆಂದು ಸಾಕ್ಷಿ ನುಡಿದಿದ್ದು, ಈಗ ಸತ್ಯಾಂಶ ಹೊರಬರುತ್ತದೆಂದು ಟೈಪಿಂಗ್ ನಲ್ಲಿ ತಪ್ಪಾಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತಪ್ಪಾಗಿರುವ ವಿಚಾರ ಯಾವಾಗ ನಿಮ್ಮ ಗಮನಕ್ಕೆ ಬಂದಿದೆ ಎಂದರೆ ಸಾಕ್ಷಿಯು ಈಗಲೇ ಗಮನಕ್ಕೆ ಬಂದಿದೆ ಎನ್ನುತ್ತಾರೆ. ಸದರಿ ವಿಚಾರವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರಿಕಯಲ್ಲಿ 3,15,000/- ರೂಪಾಯಿ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ 3,15,000/- ರೂಪಾಯಿ ಎಂದು ತಿದ್ದುಪಡಿ ಮಾಡಿರುವ ವಿಚಾರ ನನ್ನ ಗಮನಕ್ಕೆ

ಬಂದಿತ್ತು. ಸದರಿ ವಿಚಾರ ನನ್ನ ಪ್ರಮಾಣಪತ್ರಿಕೆ ಸಲ್ಲಿಸುವ ದಿನಾಂಕದಂದೆ ಗಮನಕ್ಕೆ ಬಂದಿತ್ತು. ನಾನು ಹೇಳಿರುವ ಕಟ್ಟುಕತೆಯಂತೆ 4,21,000/- ಸರಿ ಹೊಂದಿಸಲು ನನ್ನ ಪ್ರಮಾಣಪತ್ರಿಕೆಯಲ್ಲಿ 3,15,000/- ರೂಪಾಯಿ ಎಂದು ತಿದ್ದುಪಡಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಸದರಿ ಟೈಪಿಂಗ್ ನಲ್ಲಿ ಆದ ತಪ್ಪನ್ನು ತಿದ್ದುಪಡಿ ಮಾಡಲು ಅರ್ಜಿ ಸಲ್ಲಿಸಿದ್ದೇನೆ. ಸದರಿ ತಿದ್ದುಪಡಿ ಮಾಡಲು ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನ್ನ ವಕೀಲರು ಸಲ್ಲಿಸಿದ್ದಾರೆ ಎಂದು ಕೊಂಡಿದ್ದೇನೆ ಎನ್ನುತ್ತಾರೆ.

**ಈ ಹಂತದಲ್ಲಿ ಪೂರ್ವಾಹ್ನದ ಕಲಾಪದ ಸಮಯ ಮೀರಿದ್ದರಿಂದ, ಮುಂದುವರೆದ ಪಾಟೀ ಸವಾಲಿಗೆ ಅಪರಾಹ್ನದ ಕಲಾಪಕ್ಕೆ ಮುಂದೂಡಲಾಯಿತು.**

**ದಿನಾಂಕಃ 17-03-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು** ಃ- **ಶ್ರೀ. ಸಿ.ಕೆ.ಜಿ.** ವಕೀಲರಿಂದ **ಆರೋಪಿ** ಪರವಾಗಿ ಃ-

7. ನಾನು ನನ್ನ ದೂರು, ಮುಖ್ಯ ವಿಚಾರಣೆ ಪ್ರಮಾಣಪತ್ರಿಕೆಯಲ್ಲಿ ದಿ 03-08-2021 ರಂದು ಆರೋಪಿಗೆ ನೋಟಿಸ್ ನೀಡಿದ್ದೇನೆಂದು ಹೇಳಿದ್ದು, ಆ ದಿನಾಂಕದ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-3 ನೋಟಿಸಿನಲ್ಲಿ ದಿಃ 02-08-2021 ರಂದು ದಿನಾಂಕ ನಮೂದಿಸಲಾಗಿದೆ ಎಂದರೆ ಸರಿ. ನಾನು ದಿಃ 03-08-2021 ರಂದು ಮತ್ತೊಂದು ನೋಟಿಸ್ ನೀಡಿರುವುದಿಲ್ಲ, ನನ್ನ ದೂರಿನಲ್ಲಿ ತಿಳಿಸಿರುವ ದಿನಾಂಕದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗೆ ಸುಮಾರು 40 ಸಾವಿರಕ್ಕೂ ಅಧಿಕ ಮಾಸಿಕ ವೇತನ ಬರುತ್ತದೆಂದರೆ ನನಗೆ ಗೊತ್ತಿಲ್ಲ. ಆರೋಪಿಯವರಿಂದ 1,91,500/- ರೂಪಾಯಿಗಳನ್ನು ಯಾವ ರೂಪದಲ್ಲಿ

ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದು 1,91,000/- ರೂಪಾಯಿ ಆಗಿದ್ದು, 1,23,000/- ನಗದು ರೂಪದಲ್ಲಿ ಮತ್ತು 67,500/- ರೂಪಾಯಿಯನ್ನು ನನ್ನ ಖಾತೆಗೆ ವರ್ಗಾಹಿಸಿರುತ್ತಾರೆ. 1,91,000/- ರೂಪಾಯಿಗಳನ್ನು ಹಿಂದುರುಗಿಸುವ ಪೂರ್ವದಲ್ಲಿ ನಾನು ಅವರೊಂದಿಗೆ ಯಾವುದೇ ಚೆಕ್ಕಿನ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿ.

8. ಆರೋಪಿಯ ಗಂಡ ಮರಣ ಹೊಂದಿದ್ದಾರೆಂದರೆ ಸಾಕ್ಷಿಯು ಆರೋಪಿಯು ಮತ್ತೊಂದು ಮದುವೆಯಾಗಿದ್ದಾರೆಂದು ಕೇಳಲ್ಪಟ್ಟಿದ್ದೇನೆ ಎನ್ನುತ್ತಾರೆ. ಆರೋಪಿಯ ಗಂಡನ ಮರಣ ನಂತರ ಅವರಿಗೆ ಸುಮಾರು 30 ಲಕ್ಷ ಹಣ ಬಂದಿದ್ದು, ಸದರಿ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆರೋಪಿಯವರು 2 ವರ್ಷಗಳ ಹಿಂದೆ ವ್ಯಯಕ್ತಿಕ ಸಾಲ ಪಡೆಯಲು ಬ್ಯಾಂಕಿಗೆ ಹೋದಾಗ ನಾನು ಅವರೊಂದಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ಸದರಿ ಬ್ಯಾಂಕಿನವರು 3 ಸಹಿ ಮಾಡಿದ ಚೆಕ್ಕುಗಳನ್ನು ಪಡೆದುಕೊಂಡು 2 ಚೆಕ್ಕುಗಳನ್ನು ವಾಪಸ್ಸು ನೀಡಿದ್ದು, ಅದನ್ನು ಆರೋಪಿಯು ಅದನ್ನು ಬ್ಯಾಂಕಿನಲ್ಲಿಟ್ಟುಕೊಂಡಿದ್ದನ್ನು ನಾನು ನೋಡಿದ್ದೆ ಎಂದರೆ ಸರಿಯಲ್ಲ. ನಾನು ಅದೇ ದಿನ ಅವರ ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಯ ಗಮನಕ್ಕೆ ಬಾರದಂತೆ ಸದರಿಯರು ಸಹಿ ಮಾಡಿದ ಚೆಕ್ಕನ್ನು ತೆಗೆದುಕೊಂಡಿದ್ದೆ ಎಂದರೆ ಸರಿಯಲ್ಲ, ಸಾಕ್ಷಿ ನಾನು ಅವರ ಮನೆಗೆ ಹೋಗಿರಲಿಲ್ಲ ಎನ್ನುತ್ತಾರೆ. ನಾನು ಅವರ ಆತ್ಮೀಯ ಸಂಬಂಧಿಕರಾಗಿರುವುದರಿಂದ ಅವರ ಮನೆಗೆ ಪ್ರತಿದಿನ ಹೋಗಿ ಬರುತ್ತಿದ್ದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಒಂದು ದಿನ ಮಾತ್ರ ಆರೋಪಿಯ ತಮ್ಮನೊಂದಿಗೆ ಹೋಗಿದ್ದೆ ಎನ್ನುತ್ತಾರೆ.

9. ಆರೋಪಿಯ ಗಂಡನಿಗೆ ಪಿತ್ರಾರ್ಜಿತವಾಗಿ ಬಂದ 10 ಎಕರೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಗಂಡ ತುಮಕೂರು ಜಿಲ್ಲೆಯ ಬಿಳಿಗೆರೆ ಗ್ರಾಮದಲ್ಲಿರುವ ಆರೋಪಿಯ ಜಮೀನಿನಲ್ಲಿರುವ ಅಡಿಕೆ, ತೆಂಗು ವ್ಯಾಪಾರ ವ್ಯವಹಾರದ ಹಣ ವಸೂಲಾತಿಗಾಗಿ ಆರೋಪಿಯವರು ಸರ್ಕಾರಿ ನೌಕರರಾಗಿದ್ದರಿಂದ ನನ್ನನ್ನು ಕಳುಹಿಸುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಆ

ಊರೇ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಯವರು 2 ನೇ ಮದುವೆ ಆಗಿರುವ ವಿಚಾರವನ್ನು ಮೂರನೇ ವ್ಯಕ್ತಿಯಿಂದ ತಿಳಿದು ಬಂದಿದ್ದು, ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಅಡಿಕೆ ಮತ್ತು ತೆಂಗು ವ್ಯಾಪಾರದ ಹಣದ ವ್ಯವಹಾರದ ಬಗ್ಗೆ ತಿಳಿದು ಬರುತ್ತದೆಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ನಾನು ಹೊಸ ಕಾರು ಖರೀದಿ ಮಾಡಿರುತ್ತೇನೆಂದರೆ ಸರಿ. ಸದರಿ ಕಾರನ್ನು ಖರೀದಿಸಿದ ಸುಮಾರು 1 ವರ್ಷ 2 ತಿಂಗಳಾಗಿದ್ದು, ಸದರಿಯು ನನ್ನ ತಾಯಿಯ ಹೆಸರಿನಲ್ಲಿದೆ. ನಾನು ನನ್ನ ಹಳೆಯ ಕಾರನ್ನು ಮಾರಿ ಬಂದ ಹಣದಿಂದ ಹೊಸ ಕಾರನ್ನು ಖರೀದಿಸಿದ್ದು, ಆದರೆ ಆರೋಪಿಯವರನ್ನು ಪ್ರಕರಣದಲ್ಲಿ ಸಿಲುಕಿಸಬೇಕೆಂದು ಕಾರು ಮಾರಿದ ಹಣವನ್ನು ಆರೋಪಿಗೆ ನೀಡಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೆ ಎಂದರೆ ಸರಿಯಲ್ಲ. ಕಾರನ್ನು ನಾನೇ ಚಾಲನೆ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ಕಾರನ್ನು ನಾನು ಯಾವುದೇ ವ್ಯವಹಾರದ ಉದ್ದೇಶಕ್ಕೆ ಬಳಸುತ್ತಿಲ್ಲ, ಸಾಕ್ಷಿ ಮುಂದುವರೆದು ಸದರಿಯನ್ನು ಖಾಸಗಿ ಬಳಕೆಗಾಗಿ ಉಪಯೋಗಿಸುತ್ತಿದ್ದೇನೆ ಎನ್ನುತ್ತಾರೆ.

10. ಆರೋಪಿಯು ಚೆಕ್ಕನ್ನು ಬರೆಯಿಸಿಕೊಟ್ಟ ಸ್ನೇಹಿತರ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ನನ್ನ ಹೆಸರು ಮತ್ತು ಮೊತ್ತ ಬೇರೆ ಬೇರೆ ಶಾಹಿಯಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿ ಹೆಸರನ್ನು ನಾನೇ ಬರೆದುಕೊಂಡಿದ್ದು, ಮೊತ್ತವನ್ನು ಆರೋಪಿಯ ಸ್ನೇಹಿತರು ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ನನ್ನ ಹೆಸರನ್ನು ಬರೆದುಕೊಂಡಿರುವ ಹಾಗೆಯೇ ಮೊತ್ತವನ್ನು ಬರೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಮೊತ್ತವನ್ನು ಅವರ ಸ್ನೇಹಿತರೆ ಬರೆದುಕೊಟ್ಟಿದ್ದರಿಂದ ಮತ್ತೊಮ್ಮೆ ಬರೆಯುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ ಎನ್ನುತ್ತಾರೆ. ನಿಪಿ-1 ಕ್ಕೆ ದಿನಾಂಕವನ್ನು ಕೂಡ ಅವರೇ ಬರೆದುಕೊಟ್ಟಿದ್ದರು. ದಿನಾಂಕ ಮತ್ತು ಮೊತ್ತವನ್ನು ಅವರ ಸ್ನೇಹಿತರೆ ಬರೆದುಕೊಟ್ಟಿದ್ದರು. ನಿಪಿ-1 ರಲ್ಲಿ ದಿನಾಂಕ ಮತ್ತು ಮೊತ್ತವನ್ನು ಆರೋಪಿಯವರೇ ಬರೆದಿದ್ದಲ್ಲಿ, ನನ್ನ ಹೆಸರನ್ನು ಬರೆಯಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾನು ಬೇರೆಯವರಿಗೆ ಕೊಡಬೇಕಾಗಿದ್ದರಿಂದ ಹೆಸರು

ಬರೆಯಬಾರದೆಂದು ಮೊದಲೇ ಮಾತನಾಡಿದ್ದೆ ಎನ್ನುತ್ತಾರೆ. ಸದರಿ ವಿಚಾರವನ್ನು ನನ್ನ ನೋಟಿನಲ್ಲಿಯಾಗಲೀ, ದೂರಿನಲ್ಲಿಯಾಗಲೀ ಅಥವಾ ಮುಖ್ಯ ವಿಚಾರಣೆ ಪ್ರಮಾಣಪತ್ರಿಕೆಯಲ್ಲಿಯಾಗಲೀ ಹೇಳಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ಹೇಳಲು ತೊಂದರೆ ಇರಲಿಲ್ಲ.

11. ಆರೋಪಿಯು ನನಗೆ ಎಂದೂ ನಿಪಿ-1 ರ ಚೆಕ್ಕನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅವರು ಚೆಕ್ಕನ್ನು ಕೊಟ್ಟು ಬ್ಯಾಂಕಿಗೆ ಹಾಜರು ಪಡಿಸರಬಾರದೆಂದು ಹೇಳಿದ ದಾಖಲೆ ನನ್ನ ಬಳಿ ಇದೆ ಎನ್ನುತ್ತಾರೆ. ಸದರಿ ದಾಖಲಾತಿಯನ್ನು ಹಾಜರು ಪಡಿಸಿಲ್ಲ, ಸಾಕ್ಷಿ ಮುಂದುವರೆದು ನನ್ನ ವಿಚಾರಣೆಯ ವೇಳೆಯಲ್ಲಿ ಹಾಜರು ಪಡಿಸುತ್ತೇನೆ ಎನ್ನುತ್ತಾರೆ. ಸದರಿ ಯಾವುದೇ ದಾಖಲೆ ಇರದೇ ಇರುವುದರಿಂದ ವಿಚಾರಣೆ ನಡೆಯುತ್ತಿದ್ದರು ಕೂಡ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಮುಂದಿನ ವಿಚಾರಣೆಯಲ್ಲಿ ಹಾಜರು ಪಡಿಸುತ್ತೇನೆ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಿಕೆಗೂ ಹಾಗೂ ದೂರಿಗೂ ಪರಸ್ಪರ ವಿರೋಧಾಬಾಸದಿಂದ ಕೂಡಿದ್ದು, ಮೇಲ್ ನೋಟದಲ್ಲಿಯೇ ಸುಳ್ಳು ಪ್ರಕರಣವೆಂದು ಗೊತ್ತಾಗುತ್ತಿದೆಂದರೆ ಸರಿಯಲ್ಲ. ನಿಪಿ-1 ರ ಚೆಕ್ಕನ್ನು ದಿಃ 22-06-2021 ರಂದು ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ. ನಾನು ದಿಃ 29-06-2021 ರಂದು ಬ್ಯಾಂಕಿಗೆ ಹಾಜರು ಪಡಿಸಿದ್ದೆ ಎಂದರೆ ಸರಿಯಲ್ಲ. ದಿಃ 30-06-2021 ರಂದು Exceed Arrangement ಎಂದು ಹಿಂಬರಹ ಬಂದಿದೆ ಎಂದರೆ ಸರಿ. ನಾನು ಸುಳ್ಳು ದಾಖಲಾತಿಗಳನ್ನು ಹಾಜರು ಪಡಿಸಿ ಎಲ್ಲಾ ವಿಚಾರಗಳನ್ನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**
**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**